ಕರ್ನಾಟಕ ಸರ್ಕಾರ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ:ಬಿಟಿಇ/06/ಇಸಿಎಸ್(1)/2022

ಆಯುಕ್ತರವರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು -560001
ದೂರವಾಣಿ ಸಂಖ್ಯೆ:080-2220777
email:dte.commissioner@gmail.com
ದಿನಾಂಕ:03.02.2023.

## ಜ್ಞಾಪನ

ವಿಷಯ: 2022-23ನೇ ಶೈಕ್ಷಣಿಕ ಸಾಲಿನ ಜನವರಿ/ಫೆಬ್ರವರಿ-2023 ರ ಡಿಪ್ಲೋಮ ಸೆಮಿಸ್ಟರ್ ಪರೀಕ್ಷೆಗೆ ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ಪಾವತಿಸಿರುವ ವಿವರಗಳನ್ನು ಪರಿಶೀಲಿಸಿ ವರದಿ ನೀಡುವ ಕುರಿತು.

* * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಪ್ರಸಕ್ತ ಶೈಕ್ಷಣಿಕ ಸಾಲಿನ ಜನವರಿ/ಫೆಬ್ರವರಿ-2023 ರ ಡಿಪ್ಲೋಮ ಸೆಮಿಸ್ಟರ್ ಪರೀಕ್ಷೆಗೆ ನೋಂದಾಯಿಸಿರುವ ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕವನ್ನು ಪಾವತಿಸಿರುವ ವಿವರಗಳನ್ನು ಬಿಟಿಇಲಿಂಕ್ಸ್ ವೆಬ್‌ಪೋರ್ಟಲ್‌ನಲ್ಲಿನ ಅಭ್ಯರ್ಥಿಗಳ ಪಟ್ಟಿಯೊಂದಿಗೆ (Candidate List) ತುಲನೆ ಮಾಡಿ ವಿದ್ಯಾರ್ಥಿವಾರು ಪಾವತಿಸಿರುವ ದಿನಾಂಕಗಳ ಕ್ರಮಾಂಕದಲ್ಲಿ ಕೆಳಕಂಡ ನಮೂನೆಯಂತೆ ಕ್ರೋಢೀಕೃತ ಪಟ್ಟಿ ತಯಾರಿಸಿ ಉಲ್ಲೇಖಿತ ಜ್ಞಾಪನದನ್ವಯ ಆಂತರಿಕ ಅಂಕಗಳನ್ನು ಪರಿಶೀಲಿಸುವ ಪರಿವೀಕ್ಷಕರಿಗೆ ಪರಿಶೀಲನೆಗಾಗಿ ನೀಡಲು ಎಲ್ಲಾ ಸಂಸ್ಥೆಗಳ ಪ್ರಾಚಾರ್ಯರುಗಳಿಗೆ ಸೂಚಿಸಲಾಗಿದೆ.

| ಕ್ರ.ಸ. | ವಿಭಾಗ/ ಸೆಮಿಸ್ಟರ್ | ವಿದ್ಯಾರ್ಥಿಯ ಹೆಸರು | ನೋಂದಣಿ ಸಂಖ್ಯೆ | ವಿದ್ಯಾರ್ಥಿ ಪಾವತಿಸಿರುವ ಒಟ್ಟು ಪರೀಕ್ಷಾ ಶುಲ್ಕ (ರೂ. ಗಳಲ್ಲಿ) | K2 ಚಲನ್‌ಸಂಖ್ಯೆ | ದಿನಾಂಕ | ಷರಾ |
|---|---|---|---|---|---|---|---|
| 1 | | | | | | | |
| 2 | | | | | | | |
| ಒಟ್ಟು ಮೊತ್ತ ರೂ | | | | | | | |

ಆಂತರಿಕ ಅಂಕಗಳ ಪರಿವೀಕ್ಷಕರು ಪರೀಕ್ಷೆಗಳು ನಡೆಯುವ ಅವಧಿಯಲ್ಲಿ ಮೇಲ್ಕಂಡ ನಮೂನೆಯಲ್ಲಿ ಕ್ರೋಢೀಕೃತ ವಿವರಗಳನ್ನು ಸಿದ್ಧಪಡಿಸಲು ಪ್ರಿನ್ಸಿಪಾಲರುಗಳಿಗೆ ಸೂಕ್ತ ಮಾರ್ಗದರ್ಶನ ನೀಡುವುದು. ಉಲ್ಲೇಖಿತ ಜ್ಞಾಪನದನ್ವಯ ಆಂತರಿಕ ಅಂಕಗಳ ಪರಿಶೀಲನಾ ಕಾರ್ಯ ಪೂರ್ಣಗೊಳಿಸಿದ ನಂತರ ದಿನಾಂಕ:24.02.2023 ರಂದು ಬಿಟಿಇಲಿಂಕ್ಸ್ ಕ್ಯಾಂಡಿಡೇಟ್ ಲಿಸ್ಟ್ ಪ್ರಕಾರ ಪರೀಕ್ಷಾ ಶುಲ್ಕ ಪಾವತಿ ವಿವರಗಳನ್ನು ಪರಿಶೀಲಿಸಿ ಪರೀಕ್ಷೆಗೆ ವಿದ್ಯಾರ್ಥಿಗಳು ಪಾವತಿಸಬೇಕಾಗಿರುವ ಶುಲ್ಕವು ಸರ್ಕಾರಿ ಖಜಾನೆಗೆ ಪಾವತಿಸಲಾಗಿರುವ ಒಟ್ಟು ಪರೀಕ್ಷಾ ಶುಲ್ಕದ ಮೊತ್ತಕ್ಕೆ ತಾಳೆಯಾಗುತ್ತದೆಯೇ? ಎಂದು ಕೂಲಂಕಷವಾಗಿ ಪರಿಶೀಲಿಸಿ ಮಂಡಳಿಗೆ ವರದಿ ನೀಡುವಂತೆ ಸೂಚಿಸಲಾಗಿದೆ. ಮುಂದುವರೆದು ಪ್ರಾಂಶುಪಾಲರು ನೀಡಿರುವ ಕ್ರೋಢೀಕೃತ ಪಟ್ಟಿಯಲ್ಲಿ ವಿವರಗಳನ್ನು ಪರಿಶೀಲಿಸಿ ಯಾವುದೇ ವ್ಯತ್ಯಾಸ/ಲೋಪಗಳು ಕಂಡು ಬಂದಲ್ಲಿ ಷರಾ ನಮೂದಿಸಿ ಸೂಕ್ತ ದೃಢೀಕರಣದೊಂದಿಗೆ **"ಕಾರ್ಯದರ್ಶಿಗಳು, ತಾಂತ್ರಿಕ ಪರೀಕ್ಷಾ ಮಂಡಳಿ, ತಾಂತ್ರಿಕ ಶಿಕ್ಷಣ ಭವನ, ಅರಮನೆ ರಸ್ತೆ, ಬೆಂಗಳೂರು-560001"** ವಿಳಾಸಕ್ಕೆ ಅದೇ ದಿನಾಂಕದಂದು ರವಾನಿಸುವುದು. ಮತ್ತು ಪ್ರತಿಯನ್ನು btejdexam@gmail.com ವಿಳಾಸಕ್ಕೆ ಮಿಂಚಂಚೆ ಕಳುಹಿಸಲು ಸೂಚಿಸಲಾಗಿದೆ.

ಕಾರ್ಯದರ್ಶಿ
(signature) 4/2/23

ಇವರಿಗೆ,
1..ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪ್ರಾಂಶುಪಾಲರುಗಳಿಗೆ.-ಅಗತ್ಯ ಕ್ರಮಕ್ಕಾಗಿ
2.ಆಂತರಿಕ ಅಂಕಗಳ ಪರಿವೀಕ್ಷಕರುಗಳಿಗೆ- ಪರೀಕ್ಷಾ ಕೇಂದ್ರಗಳ ಪ್ರಿನ್ಸಿಪಾಲರುಗಳ ಮುಖಾಂತರ

ಪ್ರತಿ:
1. ತನಿಖಾ ದಳಗಳ ಮುಖಂಡರುಗಳಿಗೆ – ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ
2. ಕಂಪ್ಯೂಟರ್ ವಿಭಾಗ – ಬಿಟಿಇ ಲಿಂಕ್ಸ್ ವೆಬ್‌ಪೋರ್ಟಲ್‌ನಲ್ಲಿ ಪ್ರಕಟಿಸಲು
3. ಇ-ಗವರ್ನೆನ್ಸ್ ವಿಭಾಗ –ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
4. ಕಾರ್ಯದರ್ಶಿಯವರ ಆಪ್ತಶಾಖೆ
5. ಇಪಿ ವಿಭಾಗ